ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-3 Issue 2, Sep-Oct, 178-185
©*IIMRD*, Mysuru

IIMRD JOURNALS
www.iimrd.com

# ತ್ರಿವೇಣಿ ಅವರ ಕಾದಂಬರಿಗಳಲ್ಲಿ ಸ್ತ್ರೀ ಸಂವೇದನೆ

**ಡಾ. ಎಚ್ ಪಿ ಗೀತಾ** *

*ಸಹ ಪ್ರಾಧ್ಯಾಪಕಿ, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುವೆಂಪುನಗರ, ಮೈಸೂರು

***ಸಾರಾಂಶ* (Abstract)**

*ಮಹಿಳೆಯರು ಹೋರಾಟದ ಮೂಲಕವೇ ತಮ್ಮ ಹಕ್ಕು, ಆಯ್ಕೆಯ ಸ್ವಾತಂತ್ರ್ಯ, ಲಿಂಗ ಸಮಾನತೆಯನ್ನು ಪಡೆಯಬೇಕೆನ್ನುವ ಎದೆಗಾರಿಕೆಯ ಮನೋಭಾವ ರೂಪಿತವಾದಾಗ ಸ್ತ್ರೀವಾದಿ ಚಳುವಳಿ ಆರಂಭವಾಯಿತು. ಹೆಣ್ಣು ತನ್ನ ಅನುಭವಗಳನ್ನು ಆರಂಭದಲ್ಲಿ ಸಂಕೋಚದಿಂದ ಅನಂತರ ನಿರ್ಭಿಡೆಯಿಂದ ಹೇಳಿಕೊಳ್ಳಲಾರಂಬಿಸಿದಳು. ಮೊದಲ ತಲೆಮಾರಿನ ಲೇಖಕಿಯರು ಸ್ತ್ರೀ ಶಿಕ್ಷಣ, ವಿಧವಾ ವಿವಾಹ, ಸಾಮಾಜಿಕ ಕಟ್ಟುಪಾಡುಗಳು, ಬಾಲ್ಯವಿವಾಹ ಮೊದಲಾದ ವಿಷಯಗಳ ಮೇಲೆ ಕೃತಿ ರಚಿಸಲಾರಂಬಿಸಿದರು. ಆರಂಬಿಕ ಕಾಲಘಟ್ಟದ ಲೇಖಕಿಯರನ್ನು ಮೊದಲಿಗೆ ನೇತ್ಯಾತ್ಮಕ ದೃಷ್ಟಿಯಿಂದ ಪುರುಷ ಪ್ರಧಾನ ಸಮಾಜ ನೋಡಲಾರಂಬಿಸಿತು. ಆದರೆ ಮೊದಲನೇ ತಲೆಮಾರಿನ ಬರಹಗಾರ್ತಿಯರಿಗೆ ಇದ್ದ ಅಡ್ಡಿ ಆತಂಕ ಸಮಸ್ಯೆಗಳು ಎರಡನೇ ತಲೆಮಾರಿನ ಲೇಖಕಿಯರಿಗೆ ಅಷ್ಟಾಗಿ ಇರಲಿಲ್ಲ. ಸ್ತ್ರೀವಿದ್ಯಾಭ್ಯಾಸದ ಫಲವಾಗಿ ತನ್ನ ಅನುಭವಗಳನ್ನು ವ್ಯಕ್ತಪಡಿಸುವ ವಾತಾವರಣ ನಿರ್ಮಾಣವಾಗತೊಡಗಿತು. ಇದೊಂದು ನಿಧಾನಗತಿಯ ಪ್ರಕ್ರಿಯೆಯಾದರೂ ಜಾಗತಿಕವಾಗಿ ಹೆಣ್ಣನ್ನು ನೋಡುವ ದೃಷ್ಟೀಕೋನ ಬದಲಾಗತೊಡಗಿದ್ದರಿಂದ ಲಿಂಗ ಸಮಾನತೆಯ ಮಾತುಗಳು ದಿಟ್ಟ ದನಿಯಲ್ಲಿಯೆ ಕೇಳಿ ಬರಲಾರಂಭಿಸಿತು. ಇಂಥದೊಂದು ಅವಕಾಶವನ್ನು ಸದುಪಯೋಗಪಡಿಸಿಕೊಂಡು ತ್ರಿವೇಣಿಯವರು ಎರಡನೇ ತಲೆಮಾರಿನ ಲೇಖಕಿಯಾಗಿ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಗುರುತಿಸಿಕೊಳ್ಳಲಾರಂಭಿಸಿದರು.*

***ಮುಖ್ಯಪದಗಳು* (Keywords):** ಅನಸೂಯಾ, ತ್ರಿವೇಣಿ, ಭಾಗೀರಥಿ, ಮಹಿಳಾ ಸಾಹಿತ್ಯ, ನವೋದಯ ಸಾಹಿತ್ಯ.

## ಪೀಠಿಕೆ

'ಜೀವನಾನುಭವದ ಸುಂದರವಾದ ಅಭಿವ್ಯಕ್ತಿಯೇ ಸಾಹಿತ್ಯ' ಎಂಬ ಮಾತೊಂದಿದೆ. ಯಾರ ಅನುಭವ ಅಭಿವ್ಯಕ್ತಿಯ ರೂಪ ಪಡೆಯುತ್ತದೆ? ಎಂಬ ಪ್ರಶ್ನೆಯೆದ್ದಾಗ ಸಹಜವಾಗಿಯೇ ಪುರುಷ ಪ್ರಧಾನ ಸಮಾಜದಲ್ಲಿ ಅದು ಪುರುಷನ ಅನುಭವವಷ್ಟೇ ಆಗಿರುತ್ತದೆ. ಮನುಷ್ಯ ನಿರ್ಮಿತ ಸಮಾಜ ಅಭ್ಯುದಯದ ತುತ್ತ ತುದಿಯನ್ನು ತಲುಪುವವರೆಗೆ ಈ ಮಾತಿಗೆ ಅಪವಾದವೆಂಬಂತೆ ಅಲ್ಲಲ್ಲಿ ಬೆರಳೆಣಿಕೆಯಷ್ಟು

*Please cite this article as: ಗೀತಾ ಎಚ್ ಪಿ. (2021).* ತ್ರಿವೇಣಿ ಅವರ ಕಾದಂಬರಿಗಳಲ್ಲಿ ಸ್ತ್ರೀ ಸಂವೇದನೆ. *ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(2).* ಪು.ಸಂ. 178–185

ಮಹಿಳೆಯರನ್ನು ಬಿಟ್ಟರೆ ಉಳಿದಂತೆ ಸಾಹಿತ್ಯ ರಚನೆ ಒಂದು ವರ್ಗದವರ ಸ್ವತ್ತಾಗಿತ್ತು. ಆದರೆ ಮಹಿಳೆಯ ಹಕ್ಕು, ಆಯ್ಕೆಯ ಸ್ವಾತಂತ್ರ್ಯ, ಲಿಂಗ ಸಮಾನತೆಯನ್ನು ಹೋರಾಟದ ಮೂಲಕ ಪಡೆಯಬೇಕೆನ್ನುವ ಎದೆಗಾರಿಕೆಯ ಮನೋಭಾವ ರೂಪಿತವಾದಾಗ ಸ್ತ್ರೀವಾದಿ ಚಳುವಳಿ ಆರಂಭವಾಯಿತು. ತದನಂತರ ಹೆಣ್ಣನ್ನು ನೋಡುವ ದೃಷ್ಟಿಕೋನ ನಿಧಾನವಾಗಿ ಬದಲಾಗತೊಡಗಿತು. ಹೆಣ್ಣು ತನ್ನ ಅನುಭವಗಳನ್ನು ಆರಂಭದಲ್ಲಿ ಸಂಕೋಚದಿಂದ ಅನಂತರ ನಿರ್ಭಿಡೆಯಿಂದ ಹೇಳಿಕೊಳ್ಳಲಾರಂಬಿಸಿದಳು. ಮೊದಲ ತಲೆಮಾರಿನ ಲೇಖಕಿಯರು ಸ್ತ್ರೀ ಶಿಕ್ಷಣ, ವಿಧವಾ ವಿವಾಹ, ಸಾಮಾಜಿಕ ಕಟ್ಟುಪಾಡುಗಳು, ಬಾಲ್ಯವಿವಾಹ ಮೊದಲಾದ ವಿಷಯಗಳ ಮೇಲೆ ಕೃತಿ ರಚಿಸಲಾರಂಬಿಸಿದರು. ಆರಂಬಿಕ ಕಾಲಘಟ್ಟದ ಲೇಖಕಿಯರನ್ನು ಮೊದಲಿಗೆ ನೇತ್ಯಾತ್ಮಕ ದೃಷ್ಟಿಯಿಂದ ಪುರುಷ ಪ್ರಧಾನ ಸಮಾಜ ನೋಡಲಾರಂಬಿಸಿತು. ಮಹಿಳಾ ಸಾಹಿತ್ಯ ಅನುಭವ ವಿದೂರವಾದ ಸಾಹಿತ್ಯ, ಅಡುಗೆ ಮನೆಯ ಸಾಹಿತ್ಯ, ಹುಟ್ಟು, ಮುಟ್ಟು, ಹೆರಿಗೆ, ತಾಯ್ತನ ಬಿಟ್ಟರೆ ಮತ್ತೇನಿರುತ್ತದೆ? ನಾಲ್ಕುಗೋಡೆಗಳ ಮದ್ಯೆ ಇರುವ ಹೆಣ್ಣು ಮಗಳಿಗೆ ಇದರಾಚೆ ಮತ್ತಿನ್ಯಾವ ವಿಶಿಷ್ಟ ಅನುಭವಗಳಿರುತ್ತವೆ ಹೀಗೆಂದು ಪರಿಭಾವಿಸಿ ಮಹಿಳಾ ಸಾಹಿತ್ಯವನ್ನು ಹೀಗಳೆದವರೆ ಹೆಚ್ಚು. ಅದರಲ್ಲೂ ನವೋದಯದ ಬಹುಮುಖ್ಯ ಲೇಖಕರಾದ ಮಾಸ್ತಿ ಅವರಂತೂ ಮೊದಲ ತಲೆಮಾರಿನ ಲೇಖಕಿಯರ ಬರಹಗಳ ಬಗ್ಗೆ ಅಸಮಾಧಾನವನ್ನು ಬಹಿರಂಗವಾಗಿ ವ್ಯಕ್ತಪಡಿಸಿ ಹೆಣ್ಣುಮಕ್ಕಳ ಮನಸ್ಸುಗಳನ್ನು ಮಹಿಳಾ ಸಾಹಿತ್ಯ ತಲ್ಲಣಕ್ಕೀಡುಮಾಡುವುದರಿಂದ ಬರೆಯದಿರುವುದೆ ಒಳಿತು ಎಂಬರ್ಥದ ಅಭಿಪ್ರಾಯ ವ್ಯಕ್ತಪಡಿಸಿದ್ದರು. ಸನಾತನ ಮೌಲ್ಯ, ಪರಂಪರೆಗಳಿಗೆ ಧಕ್ಕೆ ಉಂಟು ಮಾಡುತ್ತವೆ ಎಂಬ ಅನುಮಾನ ಮಾಸ್ತಿ ಅವರನ್ನು ಬಹುವಾಗಿ ಕಾಡುತಿತ್ತು ಎನ್ನಿಸುತ್ತದೆ. ಹೀಗಾಗಿಯೇ 'ಚಿಕ್ಕಮಲ್ಲಮ್ಮ', 'ಒಂದು ಹಳೆಯ ಕತೆ' ಸನಾತನ ಮೌಲ್ಯ ಪರಂಪರೆಗಳಿಗೆ ಸಂರಕ್ಷಣೆಯ ಹಿನ್ನಲೆಯಲ್ಲಿ ರಚಿತವಾದವುಗಳಾಗಿವೆ. ವಿಮರ್ಶಕರಾದ ಡಾ. ವಿಜಯದಬ್ಬೆ ಈ ಹಿನ್ನಲೆಯಲ್ಲಿಯೇ ಮಾಸ್ತಿ ಅವರನ್ನು 'ಕನ್ನಡದ ಆಸ್ತಿ' ಎಂದು ಹೇಳುವುದನ್ನು ಮತ್ತೊಮ್ಮೆ ವಿವೇಚಿಸಬೇಕಾಗುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಮೊದಲನೇ ತಲೆಮಾರಿನ ಬರಹಗಾರ್ತಿಯರಿಗೆ ಇದ್ದ ಅಡ್ಡಿ ಆತಂಕ ಸಮಸ್ಯೆಗಳು ಎರಡನೇ ತಲೆಮಾರಿನ ಲೇಖಕಿಯರಿಗೆ ಅಷ್ಟಾಗಿ ಇರಲಿಲ್ಲ. ಸ್ತ್ರೀವಿದ್ಯಾಭ್ಯಾಸದ ಫಲವಾಗಿ ತನ್ನ ಅನುಭವಗಳನ್ನು ವ್ಯಕ್ತಪಡಿಸುವ ವಾತಾವರಣ ನಿರ್ಮಾಣವಾಗತೊಡಗಿತು. ಇದೊಂದು ನಿಧಾನಗತಿಯ ಪ್ರಕ್ರಿಯೆಯಾದರೂ ಜಾಗತಿಕವಾಗಿ ಹೆಣ್ಣನ್ನು ನೋಡುವ ದೃಷ್ಟೀಕೋನ ಬದಲಾಗತೊಡಗಿದ್ದರಿಂದ ಲಿಂಗ ಸಮಾನತೆಯ ಮಾತುಗಳು ದಿಟ್ಟ ದನಿಯಲ್ಲಿಯೆ ಕೇಳಿ ಬರಲಾರಂಭಿಸಿತು. ಇಂಥದೊಂದು ಅವಕಾಶವನ್ನು ಸದುಪಯೋಗಪಡಿಸಿಕೊಂಡು ತ್ರಿವೇಣಿಯವರು ಎರಡನೇ ತಲೆಮಾರಿನ ಲೇಖಕಿಯಾಗಿ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಗುರುತಿಸಿಕೊಳ್ಳಲಾರಂಭಿಸಿದರು.

ಬದಲಾವಣೆ ಎನ್ನುವುದು ತುಂಬಾ ನಿಧಾನಗತಿಯ ಪ್ರಕ್ರಿಯೆಯಾದುದರಿಂದ ಅಭಿವ್ಯಕ್ತಿಯ ಆರಂಭಿಕ ನೆಲೆಯಲ್ಲಿ ಪುರುಷಪ್ರಧಾನ ದೃಷ್ಟಿಕೋನದ ಹಿನ್ನೆಲೆಯಲ್ಲಿ ಮಹಿಳೆ ತನ್ನ ಅಸ್ತಿತ್ವವನ್ನು ಗುರುತಿಸಿಕೊಳ್ಳಲಾರಂಭಿಸಿದಳು. ಆರ್ಥಿಕ ಸ್ವಾತಂತ್ರ್ಯವಿಲ್ಲದಿರುವುದೂ ಮಹಿಳೆಯ ಈ ನಿಲುವಿಗೆ ಕಾರಣವಾಗಿತ್ತು. ಇದುವರೆವಿಗೂ ಹೆಣ್ಣನ್ನು ಗಂಡಿನ ಸರಿಸಮಾನಳಾಗಿ ಗುರುತಿಸುವ ಮಾತು ಹಾಗಿರಲಿ ಮನುಷ್ಯಳೆಂದೇ ಗುರುತಿಸಿರಲಿಲ್ಲ. ಗಂಡಿನ ಹಿತಾಸಕ್ತಿಗನುಗುಣವಾಗಿ ಹೆಣ್ಣು ವಿವಿಧ ಮುಖವಾಡಗಳನ್ನು

ಹಾಕಿಕೊಂಡು ತನ್ನ ಪಾತ್ರಗಳನ್ನು ಬದಲಿಸುತ್ತಲೇ ಇರಬೇಕಾಗಿತ್ತು. ವ್ಯವಸ್ಥೆಯಲ್ಲಿ ಗಂಡು ಗಂಡಾಗಿಯೇ ಸ್ಥಾಯಿಯಾಗಿ ಉಳಿದರೆ ಹೆಣ್ಣು ಸಂಚಾರಿಯಾಗಿ ಪುರುಷ ನಿರ್ದೇಶಿತವಾಗಿ ಬದುಕಬೇಕಾಗಿತ್ತು. ಬರಿ ಹೆಣ್ಣು ಎನ್ನುವ ಕಾರಣಕ್ಕಾಗಿ ಅನುಭವಿಸಿದ ನೋವುಗಳಿಗೆ ಲೆಕ್ಕವೇ ಇಲ್ಲ. ಹೆಣ್ಣಿನ ಸ್ವಂತದ್ದಾಗಿಯೇ ಉಳಿದಿರುವ ಒಳಗುದಿ, ತಲ್ಲಣ, ತಳಮಳ, ಅಸಹಾಯಕತೆ ಸಾಹಿತ್ಯದಲ್ಲಿ ಅಭಿವ್ಯಕ್ತಿ ಪಡೆದಿರಲೇ ಇಲ್ಲ. ಪುರುಷಕೇಂದ್ರಿತ ವ್ಯವಸ್ಥೆಯಲ್ಲಿ ಗಂಡಿನಿಂದ ಹೆಣ್ಣು ಚಿತ್ರಿತಳಾಗಿದ್ದಳೆ ವಿನಃ ಹೆಣ್ಣು ತನ್ನನ್ನು ಅಕ್ಷರ ರೂಪದಲ್ಲಿ ತೆರೆದುಕೊಳ್ಳುವ ಪ್ರಯತ್ನ ನಡೆಸಿದ್ದು ಕಡಿಮೆ. ಹೆಜ್ಜೆ ಮೂಡದ ಹಾದಿಯಲ್ಲಿ ನಡೆದವರು ಕೇವಲ ಬೆರಳಿಕೆಯಷ್ಟು ಮಂದಿ. ಕನ್ನಡ ಸಾಹಿತ್ಯವನ್ನು ಕುರಿತು ಹೇಳುವುದಾದರೆ ಅಕ್ಕಮಹಾದೇವಿಯನ್ನೊಳಗೊಂಡಂತೆ ಕೆಲವು ವಚನಕಾರ್ತಿಯರನ್ನು ಹೊರತು ಪಡಿಸಿದರೆ ನಿಜವಾಗಿ ಹೆಣ್ಣಿನ ಒಳತೋಟಿಗಳು ಅಭಿವ್ಯಕ್ತಿ ಪಡೆದಿದ್ದು ಆಧುನಿಕ ಸಾಹಿತ್ಯದಲ್ಲೆ. ಹೊಸಗನ್ನಡ ಸಾಹಿತ್ಯಿಕ ಸಂದರ್ಭದಲ್ಲಿ ಆರ್. ಕಲ್ಯಾಣಮ್ಮ, ನಂಜನಗೂಡು ತಿರುಮಲಾಂಬ, ಕೊಡಗಿನ ಗೌರಮ್ಮ ಮೊದಲಾದವರ ಕೃತಿಗಳಲ್ಲಿ ಪುರಷನಿಗಿಂತ ಭಿನ್ನವಾಗಿ ಮಹಿಳೆ ಆಯಾಯ ಸಂದರ್ಭದ ಸವಾಲುಗಳನ್ನೆದುರಿಸುವ ಭಾಷ್ಯ ಬರೆಯುತ್ತಾಳೆ.

ನವೋದಯ ಸಾಹಿತ್ಯಿಕ ಸಂದರ್ಭದಲ್ಲಿ ಸಾಹಿತ್ಯ ಕೃಷಿಯಲ್ಲಿ ತೊಡಗಿಸಿಕೊಂಡಿದ್ದ ಮಹಿಳೆಯರೆಲ್ಲರೂ ಮಧ್ಯಮ ಮತ್ತು ಮೇಲ್ಮಧ್ಯಮ ವರ್ಗದ ವಿದ್ಯಾವಂತ ಕುಟುಂಬಕ್ಕೆ ಸೇರಿದವರು. ಆರ್ಥಿಕ ಕೊರತೆ ಅಷ್ಟಾಗಿ ಕಾಡದ ಈ ಲೇಖಕಿಯರ ಕೃತಿಗಳಲ್ಲಿ ವಿದ್ಯಾವಂತ ಉದ್ಯೋಗಸ್ಥ, ಸ್ವತಂತ್ರ ಚಿಂತನೆಯ ಸ್ವಾಭಿಮಾನಿ ಮಹಿಳೆಯರು ಆವಿರ್ಭವಿಸಿದರು. ಇಂದಿನ ಸಂದರ್ಭದ ಮಹಿಳಾವಾದದ ಆಶಯಗಳು, ದೃಷ್ಟಿಕೋನಗಳು, ಕೊಡಗಿನ ಗೌರಮ್ಮ, ನಂಜನಗೂಡು ತಿರುಮಲಾಂಬಾ, ತ್ರಿವೇಣಿಯವರ ಕೃತಿಗಳಲ್ಲಿ ಸ್ಪಷ್ಟವಾಗಿ ವ್ಯಕ್ತವಾಗದಿದ್ದರೂ ಬೀಜಾಂಕುರವಾದುದನ್ನು ಗುರುತಿಸಬಹುದು. ಮಧ್ಯಮ ಮತ್ತು ಮೇಲ್ಮಧ್ಯಮ ವರ್ಗದ ಮಹಿಳೆಯರ ಸಮಸ್ಯೆಗಳು ಮತ್ತು ಅವರ ಬಗೆಗಿನ ಕಾಳಜಿಗಳೆ ಈ ಲೇಖಕಿಯರ ಅಭಿವ್ಯಕ್ತಿಯ ಪ್ರಧಾನ ಆಶಯಗಳಾದವು. (ಲೇಖಕಿಯರ ಸಾಮಾಜಿಕ ಸ್ತರಗಳು ಈ ಧೋರಣೆಗೆ ಕಾರಣವಾಗಿತ್ತೆಂಬುದನ್ನು ನಾವು ಈ ಸಂದರ್ಭದಲ್ಲಿ ಮರೆಯುವ ಹಾಗಿಲ್ಲ)

ಆಧುನಿಕ ಸಾಹಿತ್ಯದ ಆರಂಭದ ಕಾಲಘಟ್ಟದಲ್ಲಿ ನಂಜನಗೂಡು ತಿರುಮಲಾಂಬಾ ಆರ್. ಕಲ್ಯಾಣಮ್ಮನವರ ಕಿರಿಯ ಸಮಕಾಲೀನಳಾಗಿ ಸಾಹಿತ್ಯ ರಚನೆಗೆ ಕೈಹಾಕಿದ ತ್ರಿವೇಣಿಯವರು ಮೇಲಿನ ಅಭಿಪ್ರಾಯಕ್ಕೆ ಸಂಪೂರ್ಣ ಹೊರತಾಗಿರಲಿಲ್ಲವಾದರೂ ಈ ಸಂದರ್ಭದಲ್ಲಾಗಲೆ ಮಹಿಳೆಯರ ಸ್ಥಿತಿಗತಿಗಳು ಬದಲಾಗತೊಡಗಿತ್ತು. ಹೊಸಗನ್ನಡ ಸಾಹಿತ್ಯದ ಎರಡನೇ ಹಂತದ ಲೇಖಕಿಯಾಗಿ ಸಾಹಿತ್ಯ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿದ ತ್ರಿವೇಣಿಯವರಿಗೆ ಕುಟುಂಬದಲ್ಲಿ ಹೆಣ್ಣು ಅನುಭವಿಸುತ್ತಿರುವ ಹಿಂಸೆ, ನೈತಿಕ ಅಸಮಾನತೆ, ಪರಿಸ್ಥಿತಿಯ ಅನಿವಾರ್ಯತೆಯಿಂದಾಗಿ ಆಕೆ ಸಮಾಜಕ್ಕೆ ಮುಖಾಮುಖಿಯಾಗಬೇಕಾದ ಸಂದರ್ಭ, ಆಗ ಅನುಭವಿಸಬೇಕಾದ ಮಾನಸಿಕ ತಳಮಳಗಳು ತ್ರಿವೇಣಿ ಅವರ ಸಾಹಿತ್ಯದ ಮುಖ್ಯ ಕಾಳಜಿಗಳಾದವು.

ಮೂಲತಃ ಮಂಡ್ಯ ಜಿಲ್ಲೆಯವರಾದ ತ್ರಿವೇಣಿಯವರು ಸೆಪ್ಟೆಂಬರ್ 1, 1928ರಲ್ಲಿ ಜನಿಸಿದರು. ಹುಟ್ಟಿದಾಗ ಇಟ್ಟ ಹೆಸರು ಭಾಗೀರಥಿ, ಶಾಲೆಯಲ್ಲಿ ಅನಸೂಯಾ, ಕತೆಗಾರ್ತಿಯಾಗಿ ತ್ರಿವೇಣಿ. ಹೀಗೆ ಬೇರೆ

ಬೇರೆ ಹೆಸರುಗಳಿಂದ ತಮ್ಮ ಅಸ್ತಿತ್ವವನ್ನು ಗುರುತಿಸಿಕೊಂಡ ತ್ರಿವೇಣಿಯವರು ಮನಃಶಾಸ್ತ್ರದ ವಿದ್ಯಾರ್ಥಿನಿಯಾಗಿದ್ದರಿಂದ ಅವರ ಆಸಕ್ತಿಯ ವಿಷಯವು ಮನಃಶಾಸ್ತ್ರವಾಗಿತ್ತು. 'ಹೆಂಡತಿಯ ಹೆಸರು', 'ಸಮಸ್ಯೆಯ ಮಗು', 'ಬೆಕ್ಕಿನ ಕಣ್ಣು', 'ಶರ ಪಂಜರ', 'ದೂರದ ಬೆಟ್ಟ'– ಕೃತಿಗಳು ಅವರ ಮನೋವೈಜ್ಞಾನಿಕ ಕಾದಂಬರಿಗಳಾಗಿ ಗಮನ ಸೆಳೆಯುತ್ತವೆ. ಕೌಟುಂಬಿಕ ನೆಲೆಯಲ್ಲಿ ಹೆಣ್ಣು ಸಿದ್ಧ ಮಾದರಿಯನ್ನು ಬಿಟ್ಟು ಯಾವ ಯಾವ ಕಾರಣಗಳಿಗಾಗಿ ವಿಚಿತ್ರವಾಗಿ, ವಿಭಿನ್ನವಾಗಿ ವರ್ತಿಸುತ್ತಾಳೆ, ಅವಳನ್ನು ಕಾಡುವ ಮಾನಸಿಕ ಸಮಸ್ಯೆಗಳೇನು, ಯಾವ ಹಂತದಲ್ಲಿ ಅವು ಬಾಹ್ಯ ಜಗತ್ತಿಗೆ ಕಾಣಿಸಲ್ಪಡುತ್ತವೆ ಎಂಬ ವಿವರಗಳನ್ನು ಅತಿ ಸೂಕ್ಷ್ಮವಾಗಿ ಓದುಗರಿಗೆ ಮುಟ್ಟಿಸುತ್ತಾರೆ.

'ಶರಪಂಜರ' ಮನೋವಿಜ್ಞಾನದ ಹಿನ್ನೆಲೆಯಲ್ಲಿ ರಚಿತವಾದ ಕೃತಿ. ಈ ಕಾದಂಬರಿಯ ನಾಯಕಿ ಕಾವೇರಿ ತಾಯ್ತನದ 'ಭಾಗ್ಯ'ವನ್ನು ಪಡೆದುಕೊಂಡಾಗ ಸಹಜವೆಂಬಂತೆ ಶರೀರ ದುರ್ಬಲವಾಗುತ್ತದೆ. ಶಾರೀರಿಕ ದೌರ್ಬಲ್ಯದೊಡನೆ ಮಾನಸಿಕ ದೌರ್ಬಲ್ಯವೂ ಸೇರಿದಾಗ ಮನಃಸ್ಥಿಮಿತವನ್ನು ಕಳೆದುಕೊಳ್ಳುತ್ತಾಳೆ. ಪ್ರೀತಿಸುವ ಗಂಡ, ಮನೆ ಮಕ್ಕಳಿದ್ದರೂ, ಸ್ವತಃ ತಾನೇ ಅಪೂರ್ವ ಸುಂದರಿಯಾಗಿದ್ದರೂ ಸುಪ್ತ ಪ್ರಜ್ಞಾವಸ್ಥೆಯನ್ನು ತಲುಪಿದಾಗ ಉನ್ಮಾದಿನಿಯಾಗುತ್ತಾಳೆ. ಆಸ್ಪತ್ರೆಯಲ್ಲಿ ಅವಳಿಗೆ ಬೇಕಿದ್ದ ಮಾನಸಿಕ ಚಿಕಿತ್ಸೆ ದೊರೆತರೂ, ಮೊದಲಿದ್ದ ನೆಮ್ಮದಿಯ ಬದುಕು ಮತ್ತೆ ಅವಳದಾಗಲಿಲ್ಲ. ಕುಟುಂಬ ಮತ್ತು ಕುಟುಂಬದಾಚೆ ಅವಳನ್ನು ನೋಡುವ ದೃಷ್ಟಿಕೋನ ಬದಲಾದಾಗ ಸೂಕ್ಷ್ಮ ಮನಸ್ಸಿಗೆ ಘಾಸಿಯಾಗುತ್ತದೆ. ಶಾಶ್ವತವಾಗಿ ಹುಚ್ಚಿಯಾಗುವಂತೆ ಮಾಡಿದ ಕುಟುಂಬ ಮತ್ತು ಸಮಾಜದ ವರ್ತನೆಗಳು ಹಲವು ಗಂಭೀರ ಚಿಂತನೆಗಳಿಗೆಡೆ ಮಾಡಿಕೊಡುತ್ತವೆ. ಸರಿ–ತಪ್ಪುಗಳ ವಿಚಾರದಲ್ಲಿ ಪಕ್ಷಪಾತ ನಿಲುವು ಮತ್ತೆ ಸ್ಪಷ್ಟವಾಗಿ ಎದ್ದು ಕಾಣುತ್ತದೆ. 'ಬೆಕ್ಕಿನ ಕಣ್ಣು', 'ಸಮಸ್ಯೆಯ ಮಗು', 'ಹೆಂಡತಿಯ ಹೆಸರು' ಇದೇ ಮಾದರಿಯ ಕೃತಿಗಳಾದರೂ ಎದುರಾಗುವ ಮಾನಸಿಕ ಸಮಸ್ಯೆಗಳ ಚಿತ್ರಣವಷ್ಟೆ ಲೇಖಕಿಯ ಪ್ರಧಾನ ಕಾಳಜಿಯಾಗಿಲ್ಲ. ಸಮಸ್ಯೆಗಳನ್ನು ನಮ್ಮ ಮುಂದಿಡುವುದರ ಜೊತೆಗೆ ಸಾಂತ್ವನ ಹೇಗಿರಬೇಕು ಎಂಬ ಪರ್ಯಾಯ ಚಿಂತನೆ ಲೇಖಕಿಯ ತುಡಿತವನ್ನು ಸಮಾಜಮುಖಿ ದೃಷ್ಟಿಕೋನವನ್ನು ಧ್ವನಿಸುತ್ತದೆ.

'ದೂರದ ಬೆಟ್ಟ' ಮನೋವಿಜ್ಞಾನದ ಹಿನ್ನೆಲೆಯಲ್ಲಿ ರಚನೆಯಾಗಿದ್ದು ಈ ಕಾದಂಬರಿಯಲ್ಲಿ ಎದುರಾಗುವ ಸಮಸ್ಯೆ ಮತ್ತು ಪರಿಹಾರಗಳು ಬೇರೆ ಬೇರೆ ನೆಲೆಯಲ್ಲಿ ಕೆಲಸ ಮಾಡುತ್ತವೆ. ಇಲ್ಲಿನ ಗಾಯಕಿ ಸುನಂದ ಸ್ಥಿತಿವಂತ ಕುಟುಂಬಕ್ಕೆ ಸೇರಿದ ಹೆಣ್ಣುಮಗಳು. ನವವಿವಾಹಿತಳಾಗಿದ್ದಾಗಲೇ ಗಂಡನನ್ನು ಕಳೆದುಕೊಂಡು ಜರ್ಜರಿತಳಾಗಿದ್ದರೂ ಮನೆಯವರ ಪ್ರೋತ್ಸಾಹ ವಿಚಾರಗಳ ನೆಲೆಯಲ್ಲಿ ಅವಳ ಮಾನಸಿಕ ಹೋರಾಟ ಆರಂಭವಾಗುತ್ತದೆ. ಸರಿತಪ್ಪುಗಳ ದ್ವಂದ್ವದಲ್ಲಿ ಸಿಲುಕಿದ ಅವಳ ಮನಸ್ಸು ಅವಳಿಗೆ ತಿಳಿಯದಂತೆ ಸಾಂತ್ವನ ನೀಡುವ ಕೆಲಸ ಮಾಡುತ್ತದೆ. ಗತಿಸಿದ ಗಂಡನಿಗೆ ಸಂಬಂಧಿಸಿದ ವಸ್ತುಗಳೆಲ್ಲವನ್ನು ತನಗರಿವಿಲ್ಲದಂತೆ ಬಿಸುಡುವ ನಿರಂತರ ಪ್ರಕ್ರಿಯೆ ಅವಳಿಗೆ ದೊಡ್ಡ ಪ್ರಶ್ನೆಯಾಗಿ ಕಾಡುತ್ತದೆ. ಸೂಕ್ಷ್ಮ ಮನಸ್ಸಿನ ವಿದ್ಯಾವಂತ ಹೆಣ್ಣಾಗಿದ್ದ ಸುನಂದಳೆ ತನ್ನ ಮಾನಸಿಕ ಸಮಸ್ಯೆಗೆ ಮನಃಶಾಸ್ತ್ರದ ಪ್ರಾಧ್ಯಾಪಕರನ್ನು ಕಾಣುವ ಮೂಲಕ ಸೂಕ್ತ ಚಿಕಿತ್ಸೆ ದೊರಕಿಸಿಕೊಳ್ಳುತ್ತಾಳೆ. ಈ ಕಾದಂಬರಿ ಮಾನಸಿಕ ಸಮಸ್ಯೆಯನ್ನೆ ಪ್ರಧಾನ ವಿಷಯವನ್ನಾಗಿ ಎತ್ತಿಕೊಂಡಿದ್ದರೂ ಜೊತೆಯಲ್ಲಿಯೇ ಮರುಮದುವೆಗೆ ಅದರಲ್ಲೂ ವಿಧವಾ ವಿವಾಹದಂತಹ ಸಾಮಾಜಿಕ ಸಮಸ್ಯೆಯನ್ನೆತ್ತಿಕೊಂಡು ಚರ್ಚಿಸಿರುವುದು ನಮಗೆ ಮುಖ್ಯವಾಗುತ್ತದೆ. ಈ

ಕಾದಂಬರಿಯಲ್ಲಿ ಲೇಖಕಿ ಕುಟುಂಬದವರ ಪ್ರೋತ್ಸಾಹವು ವಿಧವಾ ವಿವಾಹಕ್ಕೆ ಅಗತ್ಯವೆನ್ನುವುದರ ಜೊತೆಗೆ ಹೆಣ್ಣಿಗಿರಬೇಕಾದ ಮಾನಸಿಕ ಸ್ಥಿರತೆ ಮತ್ತು ಸಿದ್ಧತೆಯನ್ನು ಬಲವಾಗಿ ಪ್ರತಿಪಾದಿಸುತ್ತಾರೆ.

'ಹಣ್ಣೆಲೆ ಚಿಗುರಿದಾಗ', 'ಸೋತು ಗೆದ್ದವಳು', 'ತಾವರೆಯ ಕೊಳ' ಕಾದಂಬರಿಗಳಲ್ಲಿ ಹೆಣ್ಣಿನ ಅಗತ್ಯಗಳೇನು ಎಂಬುದನ್ನು ಸ್ಪಷ್ಟಪಡಿಸುತ್ತಾರೆ. 'ತಾವರೆ ಕೊಳ'ದ ರತ್ನ ಗಂಡನಿಂದ ಬಯಸುವುದು ಸಾಮಾಜಿಕ ಸ್ಥಾನಮಾನವನ್ನಲ್ಲ. ಗಂಡನ ಪ್ರೀತಿ ತುಂಬಿದ ವರ್ತನೆಯನ್ನು ಆಕೆಯ ಗಂಡ ಹೆಂಡತಿಯ ಮನಸ್ಸನ್ನರಿತು ನಡೆಯುವ ವೈದ್ಯನಲ್ಲ. ಪ್ರೀತಿವಂಚಿತಳಾದ ಆಕೆಗೆ ಮತ್ತೆಲ್ಲವೂ ಇದೆ, ಆದರೆ ಮುಖ್ಯವಾಗಿ ಬೇಕಾದ ಪ್ರೀತಿಯೆ ಅವಳಿಗೆ ಲಭ್ಯವಿಲ್ಲ. ಆದರೂ, ತನ್ನನ್ನು ಆರಾಧಿಸುವವನೊಂದಿಗೆ ಬದುಕಲು ಸಾಧ್ಯವಿಲ್ಲ. ವಿವಾಹದಂತಹ ಸಂಕೋಲೆಯನ್ನು ಹರಿದೊಗೆದು ಬದುಕಲು ಅವಳಿಗೆ ಸಾಧ್ಯವಿಲ್ಲದ್ದರಿಂದ ಮರುಭೂಮಿಯಂತಿರುವ ಅವಳ ಶುಷ್ಕ ಬದುಕು ಎಂದಿಗೂ ಅರಳದೇ ಹಾಗೆ ನಲುಗಲು ಹೆಣ್ಣಿನ ಸಿದ್ದ ಮಾದರಿಯ ಬದುಕೆ ಕಾರಣವಾಗುತ್ತದೆ.

'ಸೋತು ಗೆದ್ದವಳು' ಕಾದಂಬರಿಯ ಭಾರತಿ ಗಂಡ ವಿದೇಶದಲ್ಲಿದ್ದಾಗ ವಿವಾಹೇತರ ಸಂಬಂಧ ಹೊಂದಿದ್ದರಿಂದ ಮನೆಯವರಿಂದ ತಿರಸ್ಕೃತಳಾಗುತ್ತಾಳೆ. ಮರಳಿ ಬಂದ ಗಂಡ ತಾನೂ ಪರದೇಶದಲ್ಲಿದ್ದಾಗ ಇದೇ ರೀತಿಯ ಸಂಬಂಧಗಳನ್ನು ಹೊಂದಿದ್ದರಿಂದ ಭಾರತಿಯನ್ನು ಮತ್ತೆ ಸ್ವೀಕರಿಸುತ್ತಾನೆ. ನೈತಿಕತೆಯ ನೆಲೆಗಟ್ಟಿನಲ್ಲಿ ಚರ್ಚಾರ್ಹವಾದ ವಿವಾಹೇತರ ಸಂಬಂಧ, ಅನಂತರದ ಬದುಕಿನ ಸಾಧ್ಯತೆಗಳನ್ನು ಕುರಿತಂತೆ ಇಲ್ಲಿ ಚರ್ಚಿಸುತ್ತಾರೆ. ಮತ್ತೆ ಸಮಾಜದ ಎರಡು ಭಿನ್ನ ದೃಷ್ಟಿಕೋನಗಳನ್ನು ಖಂಡಿಸುತ್ತ ನೊಂದ ಹೆಣ್ಣಿನ ಪರ ನಿಲ್ಲುತ್ತಾರೆ. ಈ ಕಾದಂಬರಿಯಲ್ಲಿ ತ್ರಿವೇಣಿಯವರು ವಿವಾಹೇತರ ಸಂಬಂಧಗಳನ್ನು ಪುರಸ್ಕರಿಸದೇ ಅನಿವಾರ್ಯ ಸಂದರ್ಭದಲ್ಲಿ ಈ ರೀತಿಯ ತಪ್ಪುಗಳಾಗುವುದು ಸಹಜ. ಎಂದೋ ಒಮ್ಮೆ ಪರಿಸ್ಥಿತಿ ಕೈಮೀರಿ ನಡೆದ ತಪ್ಪನ್ನೇ ದೊಡ್ಡದಾಗಿ ಪರಿಗಣಿಸಿ ಮುಂದಿನ ಬಾಳನ್ನು ಹಾಳು ಮಾಡಿಕೊಳ್ಳುವುದರ ಬದಲು ಮತ್ತೊಮ್ಮೆ ಬದುಕುವ ಅವಕಾಶವನ್ನು ನೀಡಬೇಕೆಂಬ ಸ್ತ್ರೀಪರ, ಮನುಷ್ಯಪರ ಕಾಳಜಿಯನ್ನು ವ್ಯಕ್ತಪಡಿಸುತ್ತಾರೆ.

'ಅಪಸ್ವರ', 'ಅಪಜಯ', 'ಬೆಳ್ಳಿಮೋಡ' ಕಾದಂಬರಿಗಳಲ್ಲಿ ಮೀರಾ, ಇಂದಿರಾ ತಮ್ಮ ಬದುಕಿಗೆ ಸಂಬಂಧಿಸಿದಂತೆ ಕೈಗೊಳ್ಳುವ ತೀರ್ಮಾನಗಳಿಗೆ ಪೂರಕವಾಗಿ ತ್ರಿವೇಣಿ ಸ್ಪಂದಿಸುತ್ತಾರೆ. ವೈದ್ಯಳಾಗಬೇಕೆಂಬ ಹೆಬ್ಬಯಕೆಯನ್ನು ಹೊಂದಿ ಕಾರ್ಯಪ್ರವೃತಳಾಗಿದ್ದ ಮೀರಾಳ ಕನಸು ಮದುವೆಯೊಂದಿಗೆ ಮುರಿದು ಬೀಳುತ್ತದೆ. ನಿರಾಶೆಯಾದರೂ ಪಾಲಿಗೆ ಬಂದದ್ದು ಪಂಚಾಮೃತವೆಂಬಂತೆ ಹೊಂದಾಣಿಕೆ ಮಾಡಿಕೊಂಡು ಮಗುವಿನ ಮೂಲಕ ಸಾರ್ಥಕ ಬದುಕಿನ ಕನಸು ಹೊತ್ತಿದ್ದ ಮೀರಾಳಿಗೆ ಮಗಳ ಸಾವು ಆಘಾತವನ್ನುಂಟು ಮಾಡುತ್ತದೆ. ಮತ್ತೊಮ್ಮೆ ತಾಯಿಯಾಗುವ ಅವಕಾಶದಿಂದ ವಂಚಿತಳಾದ ಮೀರಾ ಸಾಂಸಾರಿಕ ಚೌಕಟ್ಟನ್ನು ಮೀರಿ ಹಿಂದಿನ ಕನಸನ್ನು ನನಸಾಗಿಸಿಕೊಳ್ಳುವ ದಾರಿಯಲ್ಲಿ ಮುನ್ನಡೆಯುತ್ತಾಳೆ. ಇಲ್ಲಿ ಗುರಿಸಾಧನೆಗಾಗಿ ಮನೆಯಿಂದ ದೂರವಾಗುವುದನ್ನೇ ಲೇಖಕಿ ಸಂಸಾರದಲ್ಲಿನ 'ಅಪಸ್ವರ'ವೆಂದು ಗುರುತಿಸಿ ಹಾಗೆ ಹೆಸರನ್ನು ನೀಡಿದ್ದಾರೆ. ಮುಂದುವರೆದು 'ಅಪಜಯ'ದಲ್ಲಿ ಗುರಿ ತಲುಪಿದರೂ ಅಪಸ್ವರದಲ್ಲಿ ಸುಸ್ವರ ಹೊರಡಿಸಲು ಮೀರಾಳಿಗೆ ಸಾಧ್ಯವಾಗುವುದಿಲ್ಲ. ಅಂತಿಮವಾಗಿ ಸಾಂಸಾರಿಕ ಬದುಕಿನಲ್ಲಿ ವೈಫಲ್ಯವನ್ನನುಭವಿಸಿದ ಮೀರಾ

ಕುಟುಂಬದಾಚೆ ತನ್ನ ಅಸ್ತಿತ್ವವನ್ನು ಕಂಡುಕೊಳ್ಳುತ್ತಾಳೆ. ಈ ಕಾದಂಬರಿಯಲ್ಲಿ ನಾವು ಮುಖ್ಯವಾಗಿ ಗುರುತಿಸಬೇಕಾಗಿರುವುದು ಮೀರಾಳ ಸಂಸಾರದ ಅಪಸ್ವರ, ಅಪಜಯವೇ ಹೊರತು ಅವಳ ಗುರಿಸಾಧನೆಗೆ ತೊಡಕಾದ ಅಪಸ್ವರ, ಅಪಜಯಗಳಲ್ಲ. ಸಂಸಾರದ ಈ ಎರಡು ಸೋಲುಗಳ ಚರ್ಚೆ, ತೊಳಲಾಟ, ನಿಲುವು ಬಹಳ ಸಮಾಜಮುಖಿ ಬದುಕಿನ ಗೆಲುವಿಗೆ ಭಾಷ್ಯವೇ ಆಗಿದೆ.

'ಬೆಳ್ಳಿಮೋಡ'ದಲ್ಲಿ ಸಾಮಾನ್ಯ ರೂಪಿನ ಇಂದಿರಾ ಹಣಕ್ಕಾಗಿ, ಅವಕಾಶಕ್ಕಾಗಿ ತನ್ನನ್ನು ಮದುವೆಯಾಗಲು ಸಿದ್ದನಿದ್ದ ಮೋಹನನ ನಿಜಬಣ್ಣ ತಿಳಿದೊಡನೆ ಅವನನ್ನು ತಿರಸ್ಕರಿಸುತ್ತಾಳೆ. ಇದೇ ಸಂದರ್ಭದಲ್ಲಿ ಆಕಸ್ಮಿಕವಾಗಿ ಕಾಲು ಮುರಿದುಕೊಂಡು ಇಂದಿರೆಯ ಮನೆಯಲ್ಲೇ ಉಳಿಯಬೇಕಾದ ಪ್ರಸಂಗ ಎದುರಾದಾಗ ಅತಿಥಿಯೊಬ್ಬರನ್ನು ನೋಡಿಕೊಳ್ಳುವಂತೆ ನಿರ್ಲಿಪ್ತವಾಗಿ ಅವನನ್ನು ಉಪಚರಿಸುತ್ತಾಳೆ. ಅವಳ ಬಾಹ್ಯ ಸೌಂದರ್ಯಕ್ಕಿಂತ ಅಂತರಂಗದ ಸೌಂದರ್ಯ, ವ್ಯಕ್ತಿತ್ವಕ್ಕೆ ಕ್ರಮೇಣ ಮೋಹನ ಮಾರುಹೋದಾಗ, ಮದುವೆಯ ಬಗ್ಗೆ ಸಂವೇದನೆಯನ್ನೇ ಕಳೆದುಕೊಂಡಿದ್ದ ಇಂದಿರಾ ತನ್ನ ತಮ್ಮನನ್ನು ಬೆಳೆಸುವ ಹಿರಿದಾದ ಗುರಿಗಿಂತ ಮುಖ್ಯವಾಗಿ ಬೇರಾವುದೂ ಇಲ್ಲ ಎನ್ನುತ್ತಾಳೆ. ಬಾಹ್ಯಪ್ರಪಂಚಕ್ಕೆ ಹೆಣ್ಣು ತೆರೆದುಕೊಳ್ಳುವ ಪರಿಯನ್ನು, ಅವಳ ದೃಢ ನಿರ್ಧಾರವನ್ನು ಆ ಮೂಲಕವಾಗಿ ಹೆಣ್ಣು ಸಾಮಾಜಿಕ ಚೌಕಟ್ಟನ್ನು ಮೀರಿ ತನ್ನ ತೀರ್ಮಾನಗಳಿಗೆ ಬದ್ಧಳಾಗುತ್ತಿದ್ದ ರೀತಿಯನ್ನು ಇಲ್ಲಿ ತ್ರಿವೇಣಿ ಮನಗಾಣಿಸುತ್ತಾರೆ.

ಪ್ರೀತಿಸುವ ಪತಿ, ಮನೆ, ಮಕ್ಕಳಿದ್ದರೆ ಸಾಕು ತನ್ನ ಬದುಕು ಸಾರ್ಥಕವಾದಂತೆ ಎಂದು ಭಾವಿಸುವ ಹೆಣ್ಣು ಅಂತಿಮವಾಗಿ ಬಯಸುವುದು ಬೆಚ್ಚನೆಯ ಆಸರೆ ನೀಡಬಲ್ಲಂತಹ ಸಾಮಾಜಿಕ ಭದ್ರತೆಯನ್ನು. ಇವುಗಳಲ್ಲೆ ತನ್ನ ಬದುಕು ಸುಂದರ ಎಂದು ಭಾವಿಸುವ ಹೆಣ್ಣಿನ ಈ ಕನಸುಗಳು ಸಾಕಾರಗೊಳ್ಳದಿದ್ದಾಗ ಸಂಸಾರದ ಸಿದ್ದ ಚೌಕಟ್ಟನ್ನು ಮೀರಿ ಸಮಾಜಕ್ಕೆ ತೆರೆದುಕೊಂಡು ಅನುಭವಿಸಿದ ಶೋಷಣೆಯನ್ನು 'ಮೊದಲ ಗೆಜ್ಜೆ', 'ಹೂವುಹಣ್ಣು' ಕಾದಂಬರಿಗಳಲ್ಲಿ ಕಾಣಬಹುದು. ಇವೆರಡರ ವಸ್ತು ಬೇರೆಯಾಗಿದ್ದರೂ ಆಶಯ ಮಾತ್ರ ಒಂದೇ ಆಗಿದೆ. ಸಮಾಜದ ಕಪಿಮುಷ್ಟಿಗೆ ಸಿಲುಕಿ ಹೆಣ್ಣಿನ ಜೀವ ವಿಲಿವಿಲಿ ಒದ್ದಾಡುವ ಪರಿ ಮನಸ್ಸನ್ನು ತಲ್ಲಣಗೊಳಿಸುತ್ತದೆ. ಬಡತನದಲ್ಲೇ ಬೇಯುತ್ತಿರುವ ತಂದೆತಾಯಿಗಳಿಗೆ ಬೇಡದ ಮಗುವಾಗಿಯೇ ಹುಟ್ಟಿದ ಆಕೆ ಹೆಜ್ಜೆಹೆಜ್ಜೆಗೂ ಅನುಭವಿಸಿದ ನೋವು, ತಿರಸ್ಕಾರ, ಅಪಮಾನ, ಅವಳನ್ನು ಹಣ್ಣು ಮಾಡುತ್ತಾ ಹೋಗುತ್ತದೆ. ವಯಸ್ಸಾದರೂ ಮದುವೆಯಾಗದಿದ್ದಾಗ ನೈತಿಕ ಎಲ್ಲೆಯನ್ನು ಮೀರಿ ತನ್ನ ಹಸಿವನ್ನು ಪೂರೈಸಿಕೊಳ್ಳುತ್ತಾಳೆ. ಹುಟ್ಟಿದ ಮಗುವನ್ನು ಸಾಯಿಸಿ ಜೈಲು ಸೇರುತ್ತಾಳೆ. 'ಹೂವು ಹಣ್ಣು'ವಿನಲ್ಲಿ ಗಂಡನ ಸಾವಿನ ನಂತರ ಅನ್ಯ ಮಾರ್ಗವಿಲ್ಲದ ಜೀವನೋಪಾಯಕ್ಕಾಗಿ ಆಕೆ ವೇಶ್ಯಾವೃತ್ತಿಗಿಳಿದ ಹೆಣ್ಣಿನ ಚಿತ್ರಣವಿದೆ. ಗಂಡನನ್ನು ಕಳೆದುಕೊಂಡ ಹೆಣ್ಣನ್ನು ಮದುವೆಯಾಗಿಲ್ಲದ ಹೆಣ್ಣನ್ನು, ಆಕೆ ಅಸಹಾಯಕಳು ಎಂದು ಗೊತ್ತಾದೊಡನೆ ನಿರ್ದಾಕ್ಷಿಣ್ಯವಾಗಿ ಕೊಳ್ಳುವ ಸರಕನ್ನಾಗಿ ಪರಿವರ್ತಿಸಿ ಹೇಗೆ ಸಮಾಜ ಹುರಿದು ಮುಕ್ಕುತ್ತದೆ ಎಂಬುದನ್ನು ಇವರೆರಡು ಕಾದಂಬರಿಗಳಲ್ಲಿ ಕಾಣಬಹುದು.

'ಹಣ್ಣೆಲೆ ಚಿಗುರಿದಾಗ' ಕಾದಂಬರಿ ವಿಧವಾ ವಿವಾಹದ ಅಗತ್ಯತೆಯನ್ನು ಪುನರುಚ್ಚರಿಸುತ್ತದೆ. 'ದೂರದ ಬೆಟ್ಟ'ದಂತೆ ಇಲ್ಲೂ ಮದುವೆಯ ಬಿಸಿ ಆರುವ ಮುನ್ನವೇ ಗಂಡನನ್ನು ಕಳೆದುಕೊಂಡ ಮಾಲತಿ ಸಂಪ್ರದಾಯಸ್ಥ ಕುಟುಂಬಕ್ಕೆ ಸೇರಿದವಳು. ಮದುವೆ, ಸಂಸಾರಗಳನ್ನು ಗೊತ್ತು ಮಾಡಿಕೊಳ್ಳುವ ಮುನ್ನವೇ

ವಿಧವೆಯಾದ ಮಾಲತಿ ವಿಧುರ ಪ್ರಸಾದನನ್ನು ಮೆಚ್ಚಿಕೊಳ್ಳುತ್ತಾಳೆ. ಆತನನ್ನು ಮದುವೆಯಾಗಲು ಸಂಪ್ರದಾಯನಿಷ್ಠರಾದ ಆಕೆಯ ತಂದೆ ರಾಯರನ್ನು ಹೊರತುಪಡಿಸಿ ಎಲ್ಲರೂ ಪ್ರೋತ್ಸಾಹಿಸುತ್ತಾರೆ. ಮೊದಲಿಗೆ ನಿಷ್ಠುರವಾಗಿ ಮರುಮದುವೆಯ ವಿರುದ್ಧವಿದ್ದ ರಾಯರು ವಿಧವಾ ವಿವಾಹವನ್ನು ಒಪ್ಪಿಕೊಳ್ಳುವ ಮಟ್ಟಿಗೆ ಸುಧಾರಣಾವಾದಿಯಾಗುತ್ತಾರೆ.

ತ್ರಿವೇಣಿಯವರು ಸುಮಾರು ಒಂದು ದಶಕದ ಅವಧಿಯಲ್ಲಿ ಮೂರು ಕಥಾ ಸಂಕಲನಗಳನ್ನು, ಇಪ್ಪತ್ತು ಕಾದಂಬರಿಗಳನ್ನು ರಚಿಸಿದ್ದಾರೆ. ಇವರ ಕೃತಿಗಳನ್ನು ಆಶಯದ ದೃಷ್ಟಿಯಿಂದ ಕೌಟುಂಬಿಕ, ಮಾನಸಿಕ ಮತ್ತು ಸಾಮಾಜಿಕ ನೆಲೆಯ ಕಾದಂಬರಿಗಳೆಂದು ವರ್ಗೀಕರಿಸಬಹುದು. ಇವರ ಬಹುತೇಕ ಕಾದಂಬರಿಗಳಲ್ಲಿ ಗಂಭೀರವಾದ ಸಮಸ್ಯೆಯನ್ನೆತ್ತಿಕೊಂಡು ಜವಾಬ್ದಾರಿಯುತವಾಗಿ ಪ್ರತಿಕ್ರಿಯಿಸಿರುವುದು ಕಂಡುಬರುತ್ತದೆ. ಕೆಲವೆಡೆ ಮಾತ್ರ ಅಪವಾದವೆಂಬಂತೆ ಕೆಲವೊಂದು ಕೃತಿಗಳು ಯುವಜನಾಂಗದ ಮನಸ್ಸನ್ನು ಭ್ರಾಮಕ ಜಗತ್ತಿನಲ್ಲಿ ತೇಲಿಸುವಂಥ ವರ್ಣನೆ ವಿವರಗಳಿಂದು ಕೂಡಿರುವುದೂ ಉಂಟು. ಹೆಣ್ಣೇ ಪ್ರಧಾನವಾಗಿರುವ ಇವರ ಕಾದಂಬರಿಗಳಲ್ಲಿ ಮತ್ತೊಂದು ಅವ್ಯಕ್ತವಾದ ಸೂಕ್ಷ್ಮವಾದ ಮಿಡಿತವಿದೆ. ಅದೆ ಮಗುವೊಂದನ್ನು ಹೊರುವ, ಹೆರುವ ಅನುಭವವನ್ನು ಪಡೆಯುವ ಹೆಣ್ತನದ ಸಾರ್ಥಕತೆಯ ಅದಮ್ಯ ಬಯಕೆ. ಬಹುಶಃ ತ್ರಿವೇಣಿಯವರ ವೈಯಕ್ತಿಕ ಬದುಕು ಈ ಒಂದು ನಿಲುವಿಗೆ ಕಾರಣವಾಗಿರಬಹುದು. ತಾಯ್ತನದ ಅನುಭವಕ್ಕೆ ಕಾತರಿಸಿದ ತ್ರಿವೇಣಿಯವರು ಈ ಹಂಬಲದಿಂದಾಗಿಯೇ ತಾಯಾಗುವ ಸಂದರ್ಭದಲ್ಲಿ ಸಾವನಪ್ಪುತ್ತಾರೆ. ಇವರಿಂದ ಮತ್ತಷ್ಟು ಸ್ತ್ರೀಪರವಾದ ಮೌಲಿಕ ಕೃತಿಗಳನ್ನು ನಿರೀಕ್ಷಿಸುವ ಸಂದರ್ಭದಲ್ಲಿ ತಮ್ಮಿಂದ ಸಾಧ್ಯವಿಲ್ಲದ ಅನುಭವಕ್ಕೆ ಪಕ್ಕಾಗಲು ಹೋಗಿ ಸಾವನಪ್ಪಿದ್ದು ಒಂದು ದುರಂತವೇ ಸರಿ.

**ಉಪಸಂಹಾರ**

ಒಟ್ಟಾರೆಯಾಗಿ ವಸಾಹತುಶಾಹಿಯ ಆಗಮನದಿಂದ ಶಿಕ್ಷಣದ ಹಕ್ಕನ್ನು ಪಡೆದುಕೊಂಡ ಶೋಷಿತ ಮಹಿಳೆ ಎಚ್ಚೆತ್ತುಕೊಂಡು ತನ್ನ ಅನುಭವಗಳನ್ನು ದಾಖಲು ಮಾಡುವ ಪ್ರಯತ್ನದಲ್ಲಿ ಆರಂಭದ ಸ್ತ್ರೀಲೇಖಕಿಯರು ತೊಡಗಿಸಿಕೊಂಡರೆ, ಎಚ್ಚೆತ್ತುಕೊಂಡ ಮಹಿಳೆ ಅನುಭವಗಳಿಗೆ ತೆರೆದುಕೊಳ್ಳುವ, ಸಮಾಜಕ್ಕೆ ಮುಖಾಮುಖಿಯಾಗುವ ತನ್ನ ಸಮಸ್ಯೆಗಳನ್ನು ಪ್ರತಿಭಟನೆಯ ನೆಲೆಯಲ್ಲಿ ದಾಖಲಿಸುವ ಮಹಿಳೆ ತ್ರಿವೇಣಿ ಸಾಹಿತ್ಯದಲ್ಲಿ ಕಂಡುಬರುತ್ತಾಳೆ. ಇದೆಲ್ಲಕ್ಕಿಂತ ಮುಖ್ಯವಾಗಿ ತನ್ನದೇ ಆದ ಓದುಗ ವರ್ಗವೊಂದನ್ನು ಸೃಷ್ಟಿಸಿಕೊಂಡಿದ್ದು ತ್ರಿವೇಣಿ ಸಾಹಿತ್ಯದ ಒಂದು ಹೆಗ್ಗಳಿಕೆ. ಇಂದಿಗೂ ಸ್ತ್ರೀವಾದಿ ನೆಲೆಯಲ್ಲಿ, ಮನಃಶಾಸ್ತ್ರದ ಹಿನ್ನೆಲೆಯಲ್ಲಿ ಇವರ ಕೃತಿಗಳು ಚರ್ಚಿತವಾಗುತ್ತಿರುವುದು ತ್ರಿವೇಣಿಯವರ ಸಾಹಿತ್ಯದ ಮಹತ್ವವನ್ನು ಎತ್ತಿಹಿಡಿಯುತ್ತದೆ.

**ಪರಾಮರ್ಶನ/ಆಕರ ಗ್ರಂಥಗಳು**


- ಆಮೂರ ಜಿ.ಎಸ್. (1994). ಕನ್ನಡ ಕಥನ ಸಾಹಿತ್ಯ: ಕಾದಂಬರಿ. ಶ್ರೀಹರಿ ಪ್ರಕಾಶನ, ಧಾರವಾಡ.

**ತ್ರಿವೇಣಿ ಅವರ ಕಾದಂಬರಿಗಳು**

- ಬೆಕ್ಕಿನ ಕಣ್ಣು. (2016). ತ್ರಿವೇಣಿ ಪಬ್ಲಿಕೇಷನ್ಸ್, ಮೈಸೂರು.
- ಹಣ್ಣೆಲೆ ಚಿಗುರಿದಾಗ. (2014). ತ್ರಿವೇಣಿ ಪಬ್ಲಿಕೇಷನ್ಸ್, ಮೈಸೂರು.

- ಶರಪಂಜರ. (2014). ಭಾರತೀ ಪ್ರಕಾಶನ, ಮೈಸೂರು.
- ಅಪಸ್ವರ. (2011). ರವಿ ಪಬ್ಲಿಕೇಷನ್ಸ್, ಮೈಸೂರು.
- ಹಣ್ಣೆಲೆ ಚಿಗುರಿದಾಗ. (2011). ಸಾಯಿ ಪ್ರಕಾಶನ, ಮೈಸೂರು.
- ಹೂವು ಹಣ್ಣು. (2011). ಸಾಯಿ ಪ್ರಕಾಶನ, ಮೈಸೂರು.
- ದೂರದ ಬೆಟ್ಟ. (2008). ತ್ರಿವೇಣಿ ಪಬ್ಲಿಕೇಷನ್ಸ್, ಮೈಸೂರು.
- ಭಾನು ಬೆಳಗಿತು. (2008). ತ್ರಿವೇಣಿ ಪಬ್ಲಿಕೇಷನ್ಸ್, ಮೈಸೂರು.